ಕರ್ನಾಟಕ ಸರ್ಕಾರ
ಹೇಳಿಕೆ ಹಾಳೆ
(ಆರ್ ಪಿ ಸಂಖ್ಯೆ 57)
ನಮೂನೆ ಸಂಖ್ಯೆ 4

ಸಿ ಆರ್ ಪಿ 67

# ಪ್ರಧಾನ ಜೆ ಎಂ ಎಫ್ ಸಿ ನ್ಯಾಯಾಲಯ ಸಿಂಧನೂರು

## ಸಿ ಸಿ ಸಂಖ್ಯೆಃ 40/2017 CW-1 PW- 1

| | |
|---|---|
| ಹೆಸರು | ಅಮರೇಶ |
| ತಂದೆಯ ಹೆಸರು | ಈರಪ್ಪ |
| ವಯಸ್ಸು | 35 |
| ಉದ್ಯೋಗ | ಸಬ್ ಪೋಸ್ಟ್‌ಮಾಸ್ಟರ್ |
| ವಾಸ ಸ್ಥಳ | ತುರ್ವಿಹಾಳ |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ ಃ 28-06-2021

## ಮುಖ್ಯ ವಿಚಾರಣೆ ಃ ಸ ಸ ಅ ರವರಿಂದ

ನಾನು 2015 ಡಿಸೆಂಬರ್ ರಿಂದ 2017, ಡಿಸೆಂಬರ್ ರವರೆಗೆ ಸಿಂಧನೂರಿನ ಅಂಚೆ ಕಛೇರಿಯಲ್ಲಿ ಪ್ರಭಾರಿ ಅಂಚೆ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಆರೋಪಿ ಅಮರೇಶ ನಾಯಕ ಇವರು 2010 ರಲ್ಲಿ ನಮ್ಮ ಅಂಚೆ ಇಲಾಖೆಯಲ್ಲಿ ಪೋಸ್ಟ್ ಮೆನ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. 2010ರ ಮಾರ್ಚ್ ಮತ್ತು ಜುಲೈ ನಡುವಿನ ಅವಧಿಯಲ್ಲಿ ಆರೋಪಿ ಅಂಚೆ ಪೇದೆ ಅಂತಾ ಕಾರ್ಯನಿರ್ವಹಿಸುವ ಸಮಯದಲ್ಲಿ ನಮ್ಮ ಇಲಾಖೆಯ ಹಣದ ಆದೇಶವನ್ನು ಅಂದರೆ ಮನಿ ಆರ್ಡ್‌ರ್‌ನ್ನು ಗ್ರಾಹಕರಿಗೆ ನಿಡದೇ ದುರ್ಬಳಕೆ ಮಾಡಿಕೊಂಡಿರುವ ಕುರಿತು ದಾಖಲೆಗಳು ಲಭ್ಯ ಆಗಿರುತ್ತವೆ. ಆ ಕಾರಣ ನಮ್ಮ ಮೇಲಾಧಿಕಾರಿಗಳು ಆರೋಪಿಯ ವಿರುದ್ದ ಕಾನೂನು ಕ್ರಮ ಕೈಗೊಳ್ಳಲು ಅನುಮತಿ ನೀಡಿದರು. ಅದರಂತೆ ಮೇಲಾಧಿಕಾರಿಗಳ ಆದೇಶದಂತೆ ದಿ: 09-05-2016ರಂದು ನಗರ ಪೋಲೀಸ್ ಠಾಣೆಗೆ ಹೋಗಿ ದೂರು ನೀಡಿದ್ದೇನೆ. ಸದರಿ ದೂರನ್ನು ನೋಡಿದರೆ ಗುರುತಿಸುತ್ತೇನೆ.

ಈಗ ನಾನು ನೋಡುತ್ತಿರುವ ದಾಖಲೆ ನಾನು ನೀಡಿರುವ ದೂರು ಆಗಿದ್ದು, ಅದನ್ನು ನಿ.ಪಿ. 1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 1 (ಎ) ಎಂದು ಗುರುತಿಸಲಾಯಿತು.

ನಾನು ನನ್ನ ದೂರಿನೊಂದಿಗೆ ಪೋಲೀಸರಿಗೆ ಅಂಚೆ ಯಾಳಿನ ಪುಸ್ತಕ ನೀಡಿರುತ್ತೇನೆ. ಹಾಗೂ 8 ಮನಿ ಆರ್ಡರ್‌ಗಳನ್ನು, 2 ಮರಣ ಪ್ರಮಾಣ ಪತ್ರಗಳನ್ನು ನೀಡಿರುತ್ತೇನೆ.

ಈಗ ನಾನು ನೋಡುತ್ತಿರುವ ದಾಖಲೆಗಳು 6 ಇನ್‌ವೈಸ್‌ಗಳು ಇರುತ್ತವೆ.

ಈಗ ನಾನು ನೋಡುತ್ತಿರುವ ದಾಖಲೆ ಮೇಲಾಧಿಕಾರಿಗಳು ನೀಡಿರುವ ಪತ್ರ ಆಗಿರುತ್ತದೆ. ಸದರಿ ದಾಖಲೆಯನ್ನು ಆರೋಪಿಯ ವಿರುದ್ಧ ಕೇಸ್ ದಾಖಲಿಸಲು ಅನುಮತಿ ನೀಡಿರುತ್ತಾರೆ.

ಸಿ ಸಿ ಸಂಖ್ಯೆ: 40/2017
CW-1 PW- 1

ಸಾಕ್ಷಿ ಗುರುತಿಸಿದ ಅಂಚೆ ಯಾಳಿನ ಪುಸ್ತಕವನ್ನು ನಿ.ಪಿ. 2 ಎಂದು ಗುರುತಿಸಲಾಯಿತು.

ಈಗ ನಾನು ನೋಡುತ್ತಿರುವ ದಾಖಲೆಗಳು 8 ಅಂಚೆ ಆದೇಶಗಳಾಗಿದ್ದು, ಅವುಗಳನ್ನು ನಿ.ಪಿ. 3 ರಿಂದ 10 ಎಂದು ಗುರುತಿಸಲಾಯಿತು.

ಸಾಕ್ಷಿ ಗುರುತಿಸಿದ 2 ಮರಣ ಪ್ರಮಾಣ ಪತ್ರಗಳನ್ನು ನಿ.ಪಿ. 11 ಮತ್ತು 12 ಎಂದು ಗುರುತಿಸಲಾಯಿತು.

ಈಗ ಸಾಕ್ಷಿ ಗುರುತಿಸಿದ 6 ಇನ್‌ವೈಸ್‌ಗಳನ್ನು ನಿ.ಪಿ. 13 ರಿಂದ 18 ಎಂದು ಗುರುತಿಸಲಾಯಿತು.

ಮೇಲಾಧಿಕಾರಿಗಳು ನೀಡಿರುವ ಅನುಮತಿ ಪತ್ರವನ್ನು ನಿ.ಪಿ. 19 ಎಂದು ಗುರುತಿಸಲಾಯಿತು.

ನಾವು ದೂರು ನೀಡಿದ ನಂತರ ಪೋಲೀಸರು ನಮ್ಮ ಅಂಚೆ ಕಛೇರಿಗೆ ಬಂದು ಪಂಚನಾಮೆ ಮಾಡಿರುತ್ತಾರೆ. ಸದರಿ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ನಿ.ಪಿ. 20 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 20(ಎ) ಎಂದು ಗುರುತಿಸಲಾಯಿತು.

ಈಗ ನಾನು ನೋಡುತ್ತಿರುವ ದಾಖಲೆ ಪೋಲೀಸರು ನನ್ನಿಂದ ದಾಖಲೆ ಪಡೆದುಕೊಂಡು ನಂತರ ಮಾಡಿದ ಜಪ್ತಿ ಪಂಚನಾಮೆಯಾಗಿರುತ್ತದೆ. ಸದರಿ ಪಂಚನಾಮೆಯನ್ನು ನಿ.ಪಿ. 21 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 21(ಎ) ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸ.ಸ.ಅ. ರವರು ಕಾಲಾವಕಾಶ ಕೋರಿರುತ್ತಾರೆ, ನೀಡಲಾಯಿತು.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ,

ಪ್ರಧಾನ ಜೆ.ಮ್.ಎಫ್.ಸಿ. ಸಿಂಧನೂರು.